# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 57 (547)

**ಮಾನ್ಯ ಸದಸ್ಯರ ಹೆಸರು** : ಶ್ರೀಮತಿ ಬಲ್ಕಿಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸಬೇಕಾದ ದಿನಾಂಕ** : 14.08.2025

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯ ಆವರಣದಲ್ಲಿ ಮೈಸೂರು ಕೆ.ಆರ್.ಎಸ್. ಬೃಂದಾವನ ಮಾದರಿಯಲ್ಲಿ ಉದ್ಯಾನವನ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಉದ್ಯಾನವನ ನಿರ್ಮಾಣ ಮಾಡಲು ಇರುವ ಅಡಚಣೆಗಳಾವುವು; (ವಿವರ ನೀಡುವುದು)</td><td>ಹೌದು. ಬಂದಿದೆ. ಸದರಿ ಜಲಾಶಯವು ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: ಪ್ರಇ/250/ಪ್ರವಾಯೋ/2018, ದಿನಾಂಕ:19.09.2018 ರಲ್ಲಿ ಶಿವಮೊಗ್ಗ ಜಿಲ್ಲೆ ಭದ್ರಾ ಜಲಾಶಯದ ಆವರಣದಲ್ಲಿ ಉದ್ಯಾನವನ ಹಾಗೂ ಸಂಗೀತ ಕಾರಂಜಿ ನಿರ್ಮಾಣ ಕಾಮಗಾರಿಯನ್ನು ರೂ. 200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು, ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಪ್ರಇ/316/ಪ್ರವಾಯೋ/2018, ದಿನಾಂಕ:23.11..2018 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br><br>ನಂತರ, ಸರ್ಕಾರದ ಆದೇಶ ಸಂಖ್ಯೆ: ಪ್ರಇ/50/ಟಿಡಿಪಿ/2019, ದಿನಾಂಕ:10.07.2019 ರನ್ವಯ ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಬದಲಾಗಿ KRIDL ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಪರಿಷ್ಕೃತ ಅನುಮೋದನೆ ನೀಡಲಾಗಿರುತ್ತದೆ.<br><br>ತದನಂತರ, ಸರ್ಕಾರದ ಆದೇಶ ಸಂಖ್ಯೆ: ಪ್ರಇ/50/ಟಿಡಿಪಿ/2020, ದಿನಾಂಕ:20.02.2020 ರಲ್ಲಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಬದಲಿಸಿ, ತಿದ್ದುಪಡಿ ಆದೇಶ ನೀಡಲಾಗಿರುತ್ತದೆ:-<br><br>
<table>
<tr><th>ಕ್ರ.. ಸಂ.</th><th>ದಿನಾಂಕ: 19.09.2018 ರ ಸರ್ಕಾರದ ಆದೇಶದಲ್ಲಿ ಮಂಜೂರಾದ ಕಾಮಗಾರಿ</th><th>ಅಂದಾಜು ಮೊತ್ತ</th><th>ಪರಿಷ್ಕೃತ ಮಂಜೂರು ಮಾಡಿರುವ ಕಾಮಗಾರಿ</th><th>ಅಂದಾಜು ಮೊತ್ತ</th></tr>
<tr><td>01</td><td>ಶಿವಮೊಗ, ಜಿಲ್ಲೆ, ಭದ್ರಾವತಿ ಅಣೆಕಟ್ಟು ಯೋಜನೆ (ಬಿಆರ್‌ಪಿ) ಭದ್ರಾವತಿ ತಾಲ್ಲೂಕು ಕೃಷ್ಣರಾಜಸಾಗರ ಅಣೆಕಟ್ಟು ಉದ್ಯಾನವನದ ಮಾದರಿಯಲ್ಲಿ ಉದ್ಯಾನವನ ಹಾಗೂ ಸಂಗೀತ ಕಾರಂಜಿ ನಿರ್ಮಾಣ ಕಾಮಗಾರಿ</td><td>ರೂ. 200.00 ಲಕ್ಷಗಳು</td><td>ಶಿವಮೊಗ, ಜಿಲ್ಲೆ, ಭದ್ರಾವತಿ ಅಣೆಕಟ್ಟು ಯೋಜನೆ (ಬಿಆರ್‌ಪಿ) ಪ್ರವಾಸಿ ತಾಣದಲ್ಲಿ ಚೈನ್ ಲಿಂಕ್ ಫೆನ್ಸಿಂಗ್, ಕಾಬಲ್ ಸ್ಟೋನ್ ಫ್ಲೋರಿಂಗ್ (ಪಾತ್ ವೇ) ನಿರ್ಮಾಣ ಕಾಮಗಾರಿ</td><td>ರೂ. 200.00 ಲಕ್ಷಗಳು</td></tr>
</table>
</td></tr>
</table>

| | | |
|---|---|---|
| | | ಸದರಿ ಕಾಮಗಾರಿ ಕೈಗೊಳ್ಳಲು ಮೊದಲ ಕಂತಾಗಿ ರೂ. 100.00 ಲಕ್ಷಗಳನ್ನು ವ್ಯವಸ್ಥಾಪಕ ನಿರ್ದೇಶಕರು, KRIDL ಸಂಸ್ಥೆ ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |
| ಆ) | ಉದ್ಯಾನವನ ನಿರ್ಮಾಣ ಮಾಡಲು ಜಲಾಶಾಯದ ಬಳಿ ಎಷ್ಟು ಎಕರೆ ಜಾಗ ಲಭ್ಯವಿರುತ್ತದೆ; (ವಿವರ ನೀಡುವುದು) | ಉದ್ಯಾನವನ ನಿರ್ಮಾಣ ಮಾಡಲು ಭದ್ರಾ ಜಲಾಶಯದ ಕೆಳಗಡೆ (ನದಿಯ ಎಡಭಾಗದಲ್ಲಿ) ಸಿಂಗನಮನೆ ಗ್ರಾಮದ ಸರ್ವೆ ನಂ.112ರಲ್ಲಿ ಸುಮಾರು 180 ಎಕರೆ ಜಮೀನು ಲಭ್ಯವಿರುತ್ತದೆ. |
| ಇ) | ಉದ್ಯಾನವನ ನಿರ್ಮಾಣ ನಿರ್ಮಾಣದ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು; ಉದ್ಯಾನವನ ನಿರ್ಮಾಣಕ್ಕೆ ತಗಲುವ ಮೊತ್ತ ಸರ್ಕಾರ ಮೀಸಲಿಟ್ಟಿದೆಯೇ? (ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ಸದರಿ ಉದ್ಯಾನವನ ನಿರ್ಮಾಣ ಯೋಜನೆಯನ್ನು ಕೈಗೊಳ್ಳಲು ಸ್ಥಳೀಯ ಜನ ಪ್ರತಿನಿಧಿಗಳೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ವಿವರವಾದ ಯೋಜನಾ ವರದಿಯನ್ನು ತಯಾರಿಸಲು ವಹಿವಾಟು ಸಲಹೆಗಾರರನ್ನು (Transaction Advisor) ನೇಮಿಸಿ, ಅವರ ವರದಿಯನ್ವಯ ಯೋಜನೆಗೆ ತಗಲಬಹುದಾದ ಅಂದಾಜು ಮೊತ್ತದ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಶೇಷ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಪಡೆಯುವ ಬಗ್ಗೆ ಅಥವಾ P.P.P ಮಾದರಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |

TOR 173 TDV 2025

(ಎಚ್. ಕೆ. ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು